**CC 486/2023**

**ಪ್ರಧಾನ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ವಿಜಯನಗರ ಜಿಲ್ಲೆ, ಹೊಸಪೇಟೆ.**

**ಸಿಸಿ ನಂಬರ್ 486/2023**

**ಸಿ ಡಬ್ಲೂ 9**

**ಪಿ ಡಬ್ಲೂಃ 7**

**ಸಾಕ್ಷಿಯ ಹೆಸರು - ಮಂಜುನಾಥ ನಾಯ್ಕ**
**ತಂದೆಯ ಹೆಸರು - ಸೂರ್ಯ ನಾಯ್ಕ**
**ವಯಸ್ಸು - 32 ವರ್ಷಗಳು**
**ಉದ್ಯೋಗ - ಪೋಲಿಸ್ ಪೇದೆ ಪಟ್ಟಣ ಪೋಲಿಸ್ ಠಾಣೆ**
**ವಾಸಸ್ಥಳ - ಹೊಸಪೇಟೆ**

**ಸಾಕ್ಷಿಯನ್ನು ದಿನಾಂಕಃ 26-02-2026 ರಂದು ಪ್ರಾಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ. ಪಿ. ಪಿ. ಅವರಿಂದ**

ನಾನು **01-10-2020** ರಿಂದ ಹೊಸಪೇಟೆ ಪಟ್ಟಣ ಪೋಲಿಸ್ ಠಾಣೆಯಲ್ಲಿ ಪೇದೆ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ **01-10-2022** ರಂದು ಚಾಸಾ **-1** ರವರು ನನಗೆ, ಚಾಸಾ **-6** ರಿಂದ **8** ರವರಿಗೆ ಕರೆದು ಬಸ್ ನಿಲ್ದಾಣದಲ್ಲಿ ನಕಲಿ ನಾಣ್ಯಗಳನ್ನು ಮಾರಾಟ ಮಾಡಲು ಬಂದಿರುತ್ತಾರೆ ಎಂದು ಮಾಹಿತಿ ಬಂದಿರುವುದಾಗಿ ತಿಳಿಸಿ ತಮೊಮಂದಿಗೆ ದಾಳಿಗೆ ಬರುವಂತೆ ಆದೇಶಿಸಿದದ್ದರ. ಚಾಸಾ **-8** ರವರ ಮೂಲಕ ಪಂಚರಾದ ಚಾಸಾ **-2** ಮತ್ತು **3** ರವನ್ನು ಠಾಣೆಗೆ ಕರೆಯಿಸಿ ಅವರಿಗೂ ಸಹ ದಾಳಿ ಬಗ್ಗೆ ಮಾಹಿತಿ ನೀಡಿರುತ್ತಾರೆ. ನಮ್ಮನ್ನು ಮತ್ತು ಪಂಚರನ್ನು ಕರೆದುಕೊಂಡು ಸಂಜೆ **5.35** ಗಂಟೆಗೆ ಬಸ್ ಸನಿಲ್ದಾಣಕ್ಕೆ ಕರೊದುಕೊಂಡು ಹೋಗಿರುತ್ತಾರೆ. ನಂತರ ನಾವು ನಕಲಿ ನಾಣ್ಯ ಮಾರಾಟ ಮಾಡುತ್ತಿದ್ದ ವ್ಯಕ್ತಿಗಳನ್ನು ಹುಡುಕಗಡುಡಿತ್ತಿದ್ದಾಗ ಚಾಸಾ **-1** ರವರು ಬಸ್ ಸಿಲ್ದಾಣದಲ್ಲಿ ಇದ್ದ **3** ವ್ಯಕ್ತಿಗಳನ್ನು ತೋರಿಸಿ ದಾಳಿ ಮಾಡುವಂತೆ ತಿಳಿಸಿದರು. ನಾವೆಲ್ಲರೂ ಆರೋಪಿತರನ್ನು ಹಿಡಿಯಲು ಮುಂದಾದೆವು. ನಮಗೆ

ಇಬ್ಬರು ವ್ಯಕ್ತಿಗಳು ಸ್ಥಳದಲ್ಲಿಯೇ ಸಿಕ್ಕರು. ಇನ್ನೊಬ್ಬ ವ್ಯಕ್ತಿ ಅಲ್ಲಿಂದ ಪರಾರಿಯಾದ. ಸಿಕ್ಕ ವ್ಯಕ್ತಿಗಳ ಹೆಸರುಗಳನ್ನು ಕೇಳಲಾಗಿ ಅವರ ಹೆಸರುಗಳು ಕಿರಣ ಮತ್ತು ನಾಗರಾಜ ಎಂದು ತಿಳಿಸಿದರು. ಸದರಿಯವರ ಕೈಯಲ್ಲಿ ಬಂಗಾರದಂತಹ ನಾಣ್ಯಗಳು ಇದ್ದದ್ದು ಕಂಡು ಬಂದಿತು. ಚಾಸಾ -8 ರವರು ತೂಕ ಮಾಡುವ ಮೊಹಮದ್ ಗೌಸ್ ಎಂಬ ವ್ಯಕ್ತಿಯನ್ನು ಕರೆದುಕೊಂಡು ಬಂದರು. ಆರೋಪಿತರ ಬಳಿ ಇದ್ದ ನಕಲಿ ನಾಣ್ಯಗಳನ್ನು ತೂಕ ಮಾಡಿ ನೋಡಿದಾಗ 2 ಕೆಜಿ 606 ಗ್ರಾಂ ಇದ್ದದ್ದು ಕಂಡು ಬಂದಿತು. ಆರೋಪಿ ನಾಗರಾಜನ ಬಳಿ ರೂ. 500 ಮುಖ ಬೆಲೆಯ 4 ನೋಟುಗಳು ಮತ್ತು ಲಾವಾ ಕಂಪನಿಯ ಮೊಬೈಲ್ ಫೋನ್ ದೊರೆಯಿತು. ಆರೋಪಿ ಕಿರಣನ ಅಂಗಶೋಧನೆ ಮಾಡಿದಾಗ ಯಾವುದೇ ವಸ್ತು ದೊರೆಯಲಿಲ್ಲ. ಸದರಿ ನಕಲಿ ನಾಣ್ಯಗಳನ್ನು, ಹಣವನ್ನು ಮತ್ತು ಮೊಬೈಲನ್ನು ಚಾಸಾ -1 ರವರು ಚಾಸಾ -2 ಮತ್ತು 3 ರವರ ಸಮಕ್ಷಮ ಸ್ಥಳದಲ್ಲಿಯೇ ಜಪ್ತು ಪಡಿಸಿಕೊಂಡು ಪಂಚನಾಮೆ ಕ್ರಮ ಕೈಗೊಂಡಿರುತ್ತಾರೆ.

ಆ ಸಂದರ್ಭದಲ್ಲಿ ನಾನೇ ಫೋಟೋಗಳನ್ನು ತೆಗೆದಿರುತ್ತೇನೆ. ಸಾಕ್ಷಿ ನಿಪಿಃ 3 ರ ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಫೋಟೋಗಳಿಗೆ ಸಂಬಂಧಿಸಿ ಪ್ರಮಾಣ ಪತ್ರವನ್ನು ನೀಡಿದ್ದೆ. ಸಾಕ್ಷಿ ಪ್ರಮಾಣ ಪತ್ರ ನೋಡಿ ಗುರುತಿಸಿದ್ದು, ಅದನ್ನು ನಿಪಿಃ 11 ಎಂದು ಗುರುತಿಸಲಾಯಿತು. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಮುದ್ದೆ ಮಾಲು 1 ರಿಂದ 5 ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎಂ ವಕೀಲರಿಂದ**

ಆ ದಿನ ನಮ್ಮ ಠಾಣೆಯಲ್ಲಿ ಒಟ್ಟು ಎಷ್ಟು ಜನ ಸಿಬ್ಬಂದಿಗಳು ಹಾಜರಿದ್ದರು ಎಂದು ನನಗೆ ಗೊತ್ತಿಲ್ಲ. ಯಾವ ಯಾವ ಸಿಬ್ಬಂದಿ ಸಮವಸ್ತ್ರ ಧರಿಸಿದ್ದರು ಮತ್ತು

ಯಾರು ಮಫ್ತಿಯಲ್ಲಿ ಇದ್ದರು ಎಂದು ಹೇಳಲು ಆಗುವುದಿಲ್ಲ ಅಂದರೆ ಸರಿ. ಆ ದಿನ ಠಾಣೆಯಿಂದ 7 ಜನ ಬಸ್ ನಿಲ್ದಾಣಕ್ಕೆ ಹೋಗಿದ್ದೇವು. ಚಾಸಾ -1 ರವರು ಮಾತ್ರ ಸಮವಸ್ತ್ರ ಧರಿಸಿದ್ದರು. ಉಳಿದವರು ಮಫ್ತಿಯಲ್ಲಿ ಇದ್ದರು. ಹೇಳಿಕೆಯನ್ನು ಠಾಣೆಯಲ್ಲಿಯೇ ಟೈಪ್ ಮಾಡಿ ಪ್ರಿಂಟ್ ತೆಗೆಯಲಾಗಿದೆ ಅಂದರೆ ಸರಿ. ದಾಳಿಗೆ ಹೋದಾಗ ನಾವುಗಳು ಕಂಪ್ಯೂಟರ್ ಮತ್ತು ಪ್ರಿಂಟರ್ ಗಳನ್ನು ತೆಗೆದುಕೊಂಡು ಹೋಗಿದ್ದೇವು ಅಂದರೆ ಸರಿಯಲ್ಲ. ಸ್ಥಳಕ್ಕೆ ಕಂಪ್ಯೂಟರ್ ಮತ್ತು ಪ್ರಿಂಟರ್ ಎರಡನ್ನು ತೆಗೆದುಕೊಂಡು ಹೋಗಿದ್ದೇವು. ಕಂಪ್ಯೂಟರ್ ಮತ್ತು ಪ್ರಿಂಟರ್ ಯಾವ ಕಂಪನಿಯವು ಎಂದು ನನಗೆ ಗೊತ್ತಿಲ್ಲ.

ಮೊಹಮದ್ ಗೌಸ್ ಸಾಕಷ್ಟು ಪ್ರಕರಣಗಳಲ್ಲಿ ಸಾಕ್ಷಿದಾರನಿರುತ್ತಾನೆ ಅಂದರೆ ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿ ಯಾವ ಕಂಪನಿಯ ತೂಕದ ಯಂತ್ರ ತಂದಿದ್ದರು ಎಂದು ನನಗೆ ಗೊತ್ತಿಲ್ಲ. ಪ್ರತಿ ನಾಣ್ಯದ ಪ್ರತ್ಯೇಕ ತೂಕ ಎಷ್ಟು ಇತ್ತು ಎಂದು ನನಗೆ ಗೊತ್ತಿಲ್ಲ. ಪಂಚರನ್ನು ಎಲ್ಲಿಂದ ಕರೆದುಕೊಂಡು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಚಾಸಾ -1 ರವರೊಂದಿಗೆ ನಾವುಗಳನು ದಾಳಿಗೆ ಹೋಗಿದ್ದೇವು, ಬಸ್ ನಿಲ್ದಾಣದಲ್ಲಿ ಆರೋಪಿತರನ್ನು ಹಿಡಿದಿದ್ದೇವು ಮತ್ತು ಆರೋಪಿತರ ಬಳಿ ನಕಲಿ ನಾಣ್ಯಗಳು ಇದ್ದವು ಎಂದು ಸುಳ್ಳು ನುಡಿಯತ್ತಿದ್ದೇನೆ ಅಂದರೆ ಸರಿಯಲ್ಲ. ಆರೋಪಿತರಿಂದ ನಕಲಿ ನಾಣ್ಯಗಳನ್ನು, ರೂ. 2000/- ಗಳನ್ನು ಮತ್ತು ಲಾವಾ ಮೊಬೈಲ್ ಅನ್ನು ವಶಪಡಿಸಿಕೊಂಡೆವು ಅಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಆಗಿಲ್ಲ ಅಂದರೆ ಸರಿಯಲ್ಲ. ಆದ್ದರಿಂದಲೇ ನಾನು ಪಂಚನಾಮೆಗೆ ಸಹಿ ಹಾಕಿಲ್ಲ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿಯೇ ಸೃಷ್ಟಿಸಿರುತ್ತೇವೆ ಮತ್ತು ಪ್ರಕರಣಕ್ಕೆ ಅನುಕೂಲವಾಗುವಂತೆ ಮುದ್ದೆಮಾಲುಗಳನ್ನು ನಾವೇ ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿತರಿಗೂ ಮತ್ತು ಮುದ್ದೆಮಾಲಿಗಳಿಗೂ ಯಾವುದೇ ಸಂಬಂಧ ಇಲ್ಲ ಎಂದು ಗೊತ್ತಿದ್ದರೂ ಸಹ

**CC 486/2023**

ಚಾಸಾ -1 ಮೇಲಾಧಿಕಾರಿಯಾಗಿರುವುದರಿಂದ ಆತನ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತಿದ್ದೇನೆ ಅಂದರೆ ಸರಿಯಲ್ಲ. ಫೋಟೋಗಳನ್ನು ಪ್ರಕರಣಕ್ಕೆ ಅನುಕೂಲವಾಗುವಂತೆ ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ನಾನು ಯಾವುದೇ ಪ್ರಮಾಣ ಪತ್ರ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ಆದ್ದರಿಂದಲೇ ಪ್ರಮಾಣ ಪತ್ರದಲ್ಲಿ ನನ್ನ ಸಹಿ ಇಲ್ಲ ಅಂದರೆ ಸರಿಯಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ., ವಿಜಯನಗರ ಜಿಲ್ಲೆ, ಹೊಸಪೇಟೆ.